**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂಃ ನ್ಯಾಯಾಲಯ, ಮದ್ದೂರು.**

**ಸಿ.ಸಿ.137/2020**

| | | | |
|---|---|---|---|
| ಸಾಕ್ಷಿದಾರರ ಹೆಸರು | - ಬಂಡಿ ಶ್ರೀನಿವಾಸ | | ಚಾ ಸಾ -3 |
| ತಂದೆಯ ಹೆಸರು | - ಚೆನ್ನ ವೆಂಕಟಯ್ಯ | | ಪ್ರಾ ಸಾ -2 |
| ವಯಸ್ಸು | - 41 ವರ್ಷ | | |
| ಉದ್ಯೋಗ | - ಕೆ ಎಸ್ ಆರ್ ಟಿ ಸಿ ಮೆಕ್ಯಾನಿಕ್ | | |
| ವಾಸ ಸ್ಥಳ | - ಹುಬ್ಬಳ್ಳಿ | | |

ದಿನಾಂಕಃ 11.12.2023 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ:ಅಭಿಯೋಜನೆಯ ಪರಃ ಎಪಿಪಿ ಯವರಿಂದ:**

2018 ನೇ ಸಾಲಿನಲ್ಲಿ ಒಂದು ದಿನ ನಾನು ಮದ್ದೂರಿನಿಂದ ಮಂಡ್ಯಕ್ಕೆ ಕೆ ಎಸ್ ಆರ್ ಟಿ ಸಿ ಬಸ್ಸಿನಲ್ಲಿ ಹೋಗುತ್ತಿದ್ದು, ಗೆಜ್ಜಲಗೆರೆ ಕೈಗಾರಿಕಾ ಪ್ರದೇಶದ ಬಳಿ ಹೋಗುತ್ತಿದ್ದಾಗ ಸಂಜೆ 5.00 ಗಂಟೆ ಸಮಯದಲ್ಲಿ ನಾವು ಪ್ರಯಾಣಿಸುತ್ತಿದ್ದ ಕೆ ಎಸ್ ಆರ್ ಟಿ ಸಿ ಬಸ್ಸಿಗೆ ಅಪಘಾತವಾಗಿರುತ್ತದೆ. ಸದರಿ ಅಪಘಾತ ಹೇಗೆ ಮತ್ತು ಯಾವ ರೀತಿಯಾಯಿತು ಎಂದು ನನಗೆ ಗೊತ್ತಿಲ್ಲ. ನಾನು ಹಿಂಭಾಗದಲ್ಲಿ ಕುಳಿತು ಮಲಗಿದ್ದು ಅಪಘಾತವಾದಾಗ ಎದ್ದಿರುತ್ತೇನೆ. ನನಗೆ ಅಪಘಾತದಲ್ಲಿ ಕುತ್ತಿಗೆಯ ಹತ್ತಿರ ಹಾಗೂ ಭುಜದ ಹತ್ತಿರ ಚಿಕ್ಕ ಗಾಯಗಳಾಗಿರುತ್ತದೆ.

ನಾನು ಪೊಲೀಸರಿಗೆ ಹೇಳಿಕೆ ನೀಡಿರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಎ ಪಿ ಪಿ ಯವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಭಾಗಶಃ ಸಾಕ್ಷಿಯನ್ನಾಗಿ ಪರಿಗಣಿಸಲು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ ಮಾನ್ಯ ಎ ಪಿ ಪಿ ಯವರಿಂದಃ**

ದಿ.12.09.2018 ರಂದು ನಾನು ಮತ್ತು ನನ್ನ ಮಗ ಮಂಡ್ಯಕ್ಕೆ ಹೋಗಲು ಕೆಎ-09-ಎಫ್-5180 ಕೆ ಎಸ್ ಆರ್ ಟಿ ಸಿ ಬಸ್ಸಿನಲ್ಲಿ ಹೋಗುತ್ತಿದ್ದಾಗ ಸಂಜೆ ಸುಮಾರು 6.00 ಗಂಟೆ ಸಮಯದಲ್ಲಿ ನಮ್ಮ ಬಸ್ಸಿನ ಚಾಲಕ ಅತಿ ವೇಗ ಮತ್ತು ಅಜಾಗರೂಕತೆಯಿಂದ ಚಾಲನೆ

ಮಾಡಿಕೊಂಡು ಬಂದು ಗೆಜ್ಜಲಗೆರೆ ಕೈಗಾರಿಕಾ ಪ್ರದೇಶದಲ್ಲಿ ಕೆಎ-51-3333 ಖಾಸಗೀ ಬಸ್ಸಿನ ಹಿಂಭಾಗಕ್ಕೆ ಡಿಕ್ಕಿ ಪಡಿಸಿ ಅಪಘಾತ ಪಡಿಸಿರುತ್ತಾನೆ ಹಾಗೂ ನಮ್ಮ ಹಿಂದೆ ಬಂದ ಕೆಎ-53-ಎಂಸಿ-9999 ಇನ್ನೊವಾ ಕಾರು, ಅಚಾನಕ್ಕಾಗಿ ನಮ್ಮ ಬಸ್ಸು ನಿಂತ ಕಾರಣ ನಮ್ಮ ಬಸ್ಸಿನ ಹಿಂಭಾಗಕ್ಕೆ ಡಿಕ್ಕಿ ಅಗಿರುತ್ತದೆ ಎಂದರೆ ಸರಿಯಲ್ಲ. ಅಪಘಾತಕ್ಕೆ ಆರೋಪಿಯ ಅತಿವೇಗ ಮತ್ತು ಅಜಾಗೂರುಕತೆಯ ಚಾಲನೆ ಕಾರಣ ಎಂದರೆ ಸರಿಯಲ್ಲ.

ನಾನು ದಿ.13.09.2018 ರಂದು ಅಪಘಾತವನ್ನು ಕಣ್ಣಾರೇ ಕಂಡು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಹೇಳಿಕೆಯ ಸದರಿ ಭಾಗವನ್ನು ನಿಪಿ-2 ಎಂದು ಗುರುತಿಸಲಾಯಿತು.

ನಿಪಿ-2 ರ ಎಲ್ಲಾ ವಿಚಾರ ಗೊತ್ತಿದ್ದರೂ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ಮಾನ್ಯ ಶ್ರೀ. ಬಿ ಎಸ್ ಎಸ್ ವಕೀಲರಿಂದಃ**

ಏನು ಇಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿಯಾಗಿದೆಂದು ಒಪ್ಪಿರುತ್ತಾರೆ.

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಮದ್ದೂರು.

ಸಾಕ್ಷಿ ಸಹಿಃ